ಅಸಲ ದಾವಾ ಸಂಖ್ಯೆ.94/2023

ಪಿ.ಡಬ್ಲ್ಯು. 1

**ಸಾಕ್ಷಿಯನ್ನು ದಿನಾಂಕಃ 18.09.2024 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎ.ಎಸ್.ವಾಯ್., ಪ್ರತಿವಾದಿ ಪರ ವಕೀಲರಿಂದಃ**

ಈ ದಾವೆ ಪ್ರತಿವಾದಿ ಬಸಪ್ಪ ಹನಮಪ್ಪ ಬಳೂಲದ ಇವರ ಮೇಲೆ ನನ್ನ ಜಮೀನಿನ ಕಬ್ಜಾ ಕೊಡು ಎಂದು ದಾಖಲಿಸಿರುತ್ತೇನೆ. ನನ್ನ ಜಮೀನನ್ನು ತಾಲೂಕಾ ಸರ್ವೆಯರ ಇವರಿಂದ ಮೋಜನಿ ಮಾಡಿಸಿರುತ್ತೇನೆ. ಸದರಿ ಮೋಜನಿ ವರದಿಯಲ್ಲಿ ಪ್ರತಿವಾದಿ ನನ್ನ ಜಮೀನಿನಲ್ಲಿ ಅತಿಕ್ರಮಣ ಮಾಡಿದ್ದಾನೆ ಎಂದು ನಮೂದಿಸಿರುತ್ತಾರೆ. ಸದರಿ ವರದಿಯಲ್ಲಿ ಪ್ರತಿವಾದಿ ನನ್ನ ಜಮೀನಿನಲ್ಲಿ 13 ಗುಂಟೆ ಕ್ಷೇತ್ರ ಅತಿಕ್ರಮಣ ಮಾಡಿದ್ದಾನೆ ಎಂದು ನಮೂದಿಸಿರೂತಾರೆ.

ದಿನಾಂಕಃ 21.07.2019 ರಂದು ಮೋಜನಿ ಮಾಡಿಸಿರುತ್ತೇನೆ. ವರದಿ ಅದೇ ದಿನ ನೀಡಿಲ್ಲ. ತಾಲೂಕಾ ಸರ್ವೆಯರ ಇವರು ನೀಡಿದ ವರದಿಯನ್ನು ಪ್ರಶ್ನಿಸಿ ಪ್ರತಿವಾದಿ ಮೇಲ್ಮನವಿ ದಾಖಲಿಸಿದ್ದರು ಎಂದರೆ ಸರಿ. ಅಲ್ಲಿ ಎಡಿಎಲ್ಆರ ಇವರು ತಾಲೂಕಾ ಸರ್ವೆಯರ ಇವರ ವರದಿಗೆ ತಡೆ ನೀಡಿದ್ದರು ಎಂದರೆ ಸರಿ. ಮುಂದುರೆದು ಸಾಕ್ಷಿ ಪ್ರತಿವಾದಿಯರೆ ತಮ್ಮ ಮೇಲ್ಮನವಿಯನ್ನು ಹಿಂಪಡೆದಿದ್ದಾರೆ ಎಂದು ನುಡಿಯುತ್ತಾರೆ.

ಪ್ರತಿವಾದಿಯರು ಮೇಲ್ಮನವಿ ದಾಖಲಿಸಿದ ನಂತರ ಎಡಿಎಲ್ಆರ್ ಇವರು ನನ್ನ ಜಮೀನು ಮೋಜನಿ ಮಾಡಲು ಬಂದಿಲ್ಲ. ಪ್ರತಿವಾದಿಯರು ಡಿಡಿಎಲ್ಆರ್ ಇವರ ಮುಂದೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿ ಈಗಲೂ ಚಾಲ್ತಿಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಮುಂದುವರೆದು ಸಾಕ್ಷಿ ಅದು ನಿಖಾಲಿಯಾಗಿದೆ ಆದರೆ ಏನೂ ಆದೇಶ ಆಗಿದೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿ ಈಗ ಪ್ರತಿವಾದಿಯ ಕಬ್ಜಾ ವಹಿವಾಟಿಯಲ್ಲಿದೆ. ಪ್ರತಿವಾದಿ ನನ್ನ ಜಮೀನಿನಲ್ಲಿ ಯಾವುದೇ ಅತಿಕ್ರಮಣ ಮಾಡಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ಯಾವುದೇ ಅತಿಕ್ರಮಣ ಮಾಡಿಲ್ಲದಿದ್ದರು ಸಹಿತ ಆತನಿಗೆ ತೊಂದರೆ ಕೊಡಲು ಸುಳ್ಳು ದಾವೆ ದಾಖಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು

ಮುಧೋಳ.

ಸಾಕ್ಷಿಯ ಸಹಿ